# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 476/2023**

| | | |
|---|---|---|
| ಸಾಕ್ಷಿದಾರರ ಹೆಸರು | ಮಹೇಶ | ಪ್ರಮಾಣ ವಚನ ಬೋಧಿಸಿದ ದಿನಾಂಕಃ 23.10.2025 |
| ತಂದೆಯ ಹೆಸರು | ಪುಟ್ಟವೀರಪ್ಪ | |
| ವಯಸ್ಸು | 45 ವರ್ಷ | |
| ಉದ್ಯೋಗ | ವ್ಯವಸಾಯ | ಫ್ರಾಸಾಃ 2 |
| ವಾಸ | ದೇವರಹಳ್ಳಿ ಗ್ರಾಮ | ಚಾಸಾಃ 2 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಚಾಸಾ–1 ನನ್ನ ಅಕ್ಕ. ಚಾಸಾ–3 ನನ್ನ ಅಣ್ಣ. ಚಾಸಾ–4 ರಿಂದ 8 ರವರ ಪರಿಚಯವಿರುತ್ತದೆ. ಆರೋಪಿಗಳ ಪರಿಚಯವಿರುತ್ತದೆ.

ದಿಃ 08.09.2022 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ನಾನು, ನಮ್ಮ ಅಣ್ಣ ಮತ್ತು ನಮ್ಮ ಅಕ್ಕ ಮೂವರು ನಮ್ಮ ಜಮೀನಿನ ಮನೆಯ ಹತ್ತಿರ ಇದ್ದಾಗ, ಸಿದ್ದಪ್ಪ, ಮಹೇಶ ಮತ್ತು ಬಸವೇಶ ಅಲ್ಲಿಗೆ ಬಂದು ಮನೆಯನ್ನು ಒತ್ತುವರಿ ಮಾಡಿ ಕಟ್ಟಿಕೊಂಡಿರುತ್ತೀರಿ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ನನ್ನ ಅಕ್ಕ ಬೆಳ್ಳಮ್ಮ ಏಕೆ ಬೆಯ್ಯುತ್ತೀರಿ ಎಂದು ಕೇಳಿದ್ದು, ಆಗ ಸಿದ್ದಪ್ಪ ಕಲ್ಲಿನಿಂದ ನನ್ನ ಅಕ್ಕನ ಎಡಗೈ ಮುಂಗೈಗೆ ಹೊಡೆದಿರುತ್ತಾನೆ. ಬಸವೇಶ ನನ್ನ ಅಕ್ಕನ ತಲೆ ಜುಟ್ಟನ್ನು ಹಿಡಿದು ಎಳೆದಾಡಿರುತ್ತಾನೆ. ಮಹೇಶ ನನ್ನ ಅಕ್ಕನ ಸೀರೆ ಹಿಡಿದು ಎಳೆದಾಡಿ ಅವಮಾನಪಡಿಸಿರುತ್ತಾನೆ. ಸಿದ್ದಪ್ಪ ಕೈಯಿಂದ ನನ್ನ ಅಕ್ಕನಿಗೆ ಹೊಡೆದಿರುತ್ತಾನೆ. ಮಹೇಶ ಮತ್ತು ಸಿದ್ದಪ್ಪ ನನ್ನ ಅಣ್ಣ ವೀರತ್ತಪ್ಪನಿಗೂ ಸಹ ಕೈಯಿಂದ ಹೊಡೆದಿರುತ್ತಾರೆ. ಆಗ ರಾಮಲಿಂಗಪ್ಪ ಮತ್ತು ಮಹೇಶ ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರೋಪಿಗಳು ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆಗ ಊರಿನ ಗ್ರಾಮಸ್ಥರಿಗೆ ಈ ವಿಚಾರವನ್ನು ತಿಳಿಸಿದ್ದು, ಆಗ ಊರಿನ ಗ್ರಾಮಸ್ಥರು ಆಸ್ಪತ್ರೆಗೆ ತೋರಿಸಿ ಪಿರ್ಯಾದನ್ನು ನೀಡುವಂತೆ ತಿಳಿಸಿರುತ್ತಾರೆ. ನನ್ನ ಅಕ್ಕನನ್ನು ಶಂಭಪ್ಪ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಹೊಡೆಯಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ

ಗುಂಡ್ಲುಪೇಟೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿಸಿ ನಂಃ 476/2023**

| | | |
|---|---|---|
| ಸಾಕ್ಷಿದಾರರ ಹೆಸರು | ಬೆಳ್ಳಮ್ಮ | ಪ್ರಮಾಣ ವಚನ ಬೋಧಿಸಿದ ದಿನಾಂಕಃ 23.10.2025 |
| ತಂದೆಯ ಹೆಸರು | ಪುಟ್ಟವೀರಪ್ಪ | |
| ವಯಸ್ಸು | 57 ವರ್ಷ | |
| ಉದ್ಯೋಗ | ವ್ಯವಸಾಯ | ಫ್ರಾಸಾಃ 1 |
| ವಾಸ | ದೇವರಹಳ್ಳಿ ಗ್ರಾಮ | ಚಾಸಾಃ 1 |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಚಾಸಾ–2 ಮತ್ತು 3 ರವರು ನನ್ನ ತಮ್ಮಂದಿರು. ಚಾಸಾ–4 ರಿಂದ 8 ರವರ ಪರಿಚಯವಿರುತ್ತದೆ. ಆರೋಪಿಗಳ ಪರಿಚಯವಿರುತ್ತದೆ.

ಈಗ್ಗೆ ಮೂರು ವರ್ಷಗಳ ಹಿಂದೆ ಮಧ್ಯಾಹ್ನ 1.30 ಗಂಟೆ ಸುಮಾರಿಗೆ ನಮ್ಮ ಜಮೀನಿನಲ್ಲಿ ಇರುವ ಮನೆಯಲ್ಲಿ ನಾನು, ನನ್ನ ತಮ್ಮಂದಿರು ಇದ್ದಾಗ ಸಿದ್ದಪ್ಪ, ಮಹೇಶ ಮತ್ತು ಬಸವೇಶ ಎಂಬುವರು ಬಂದು ಒತ್ತುವರಿಯಲ್ಲಿ ಮನೆ ಕಟ್ಟಿಕೊಂಡಿದ್ದಿರಾ ಎಂದು ನಮ್ಮ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ನಾನು ಏಕೆ ಬೈಯುತ್ತೀರಿ ಎಂದು ಕೇಳಿದ್ದಕ್ಕೆ ಸಿದ್ದಪ್ಪ ಕಲ್ಲಿನಿಂದ ನನ್ನ ಎಡಮುಂಗೈಗೆ ಹೊಡೆದಿರುತ್ತಾನೆ. ಮಹೇಶ ಕೈಯಿಂದ ನನಗೆ ಹೊಡೆದಿರುತ್ತಾನೆ. ಬಸವೇಶ ನನ್ನನ್ನು ಅಡ್ಡಗಟ್ಟಿ ತಡೆದಿರುತ್ತಾರೆ. ಮಹೇಶ ನನ್ನ ಸೀರೆ ಹಿಡಿದು ಎಳೆದು ಅವಮಾನಪಡಿಸಿರುತ್ತಾನೆ. ಆಗ ನಾನು ಮನೆಯ ಒಳಗಡೆ ಹೋಗಿರುತ್ತೇನೆ. ಗಲಾಟೆಯನ್ನು ರಾಮಲಿಂಗಪ್ಪ ಮತ್ತು ಮಹೇಶ ಬಿಡಿಸಿರುತ್ತಾರೆ. ಈ ಬಗ್ಗೆ ಊರಿನ ಹಿರಿಯರಿಗೆ ತಿಳಿಸಿದ್ದು, ಊರಿನ ಹಿರಿಯರು ಪಿರ್ಯಾದನ್ನು ನೀಡುವಂತೆ ತಿಳಿಸಿರುತ್ತಾರೆ. ನಂತರ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ನನ್ನ ಅಣ್ಣ ಶಂಬಪ್ಪ ಕರೆದುಕೊಂಡು ಬಂದಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಪೊಲೀಸರು ಅಲ್ಲಿಗೆ ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಾನು ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು. ಘಟನಾ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಪೊಲೀಸರು ಘಟನಾ ಸ್ಥಳದಲ್ಲಿ ಮಹಜರ್ ಮಾಡುವ ಸಮಯದಲ್ಲಿ ಸಿದ್ದರಾಜಪ್ಪನ ಮಗ ಇದ್ದರು ಹಾಗೂ ಇನ್ನೊಬ್ಬರು ಇದ್ದರು ಅವರ ಹೆಸರು ಈಗ ನನಗೆ ನೆನಪಿರುವುದಿಲ್ಲ. ಮಹಜರ್ ನ್ನು ಸಂಜೆ 6.00 ರಿಂದ 7.00

ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಮಹಜರ್ ಕಾಲಕ್ಕೆ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು.

ನಾನು ದೂರನ್ನು ನೀಡಿದ ನಂತರ ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಮತ್ತು ಅದರಲ್ಲಿ ಇರುವ ಸಾಕ್ಷಿದಾರರ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಆ ದಿನ ನನ್ನ ಜೊತೆ ಗಲಾಟೆ ಮಾಡಿದ ಆರೋಪಿಗಳು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ.

(ಈಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎಪಿಪಿರವರಿಂದಃ**

ದಿಃ 08.09.2022 ರಂದು ಗಲಾಟೆಯಾಗಿರುತ್ತದೆ ಎಂದರೆ ಸರಿ. ಬಸವೇಶ ನನ್ನ ಜುಟ್ಟನ್ನು ಹಿಡಿದು ಎಳೆದಾಡಿ ಇವಳನ್ನು ಸಾಯಿಸಿದರೆ ಎಲ್ಲಾ ಸರಿ ಹೋಗುತ್ತದೆ ಎಂದು ಹೇಳಿರುತ್ತಾನೆ ಎಂದರೆ ಸರಿ. ಆರೋಪಿಗಳಾದ ಸಿದ್ದಪ್ಪ, ಮಹೇಶ ಮತ್ತು ಬಸವೇಶ ರವರು ಇವರನ್ನು ಬಿಡಬಾರದು ಸಾಯಿಸಬೇಕೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಸಿದ್ದಪ್ಪ ಮತ್ತು ಮಹೇಶ ಚಾಸಾ-3 ವೀರತ್ತಪ್ಪ ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ.

ದಿಃ 12.09.2022 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಮಹಜರ್ ಸಾಕ್ಷಿದಾರರಾಗಿ ಪ್ರಸಾದ ಮೂರ್ತಿ ಮತ್ತು ಇಂದ್ರಪ್ಪ ಹಾಜರು ಇದ್ದರು ಎಂದರೆ ಸರಿ. ಮಹಜರ್ ನ್ನು ಸಂಜೆ 4.00 ರಿಂದ 4.45 ರವರೆಗೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ಜಡ್ಜ್ ಜೆಎಂಎಫ್ ಸಿ

ಗುಂಡ್ಲುಪೇಟೆ.